# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,

## ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-119/ವಾರ್ಡ್‌ಸಭೆ/2022-23 ದಿನಾಂಕ: 04-06-2022

### ವಾರ್ಡ್ -119ರ ವಾರ್ಡ್ ಸಭೆಯ ನಡವಳಿ

ದಿನಾಂಕ:04-06-2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-119 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಎಸ್.ಟಿ.ಶ್ರೀನಿವಾಸ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು(ಟಿ.ಇ.ಸಿ)ವಿಭಾಗ ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:-

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಎಸ್.ಟಿ.ಶ್ರೀನಿವಾಸ್ | ನೋಡಲ್ ಅಧಿಕಾರಿಗಳು | 9739520995 |
| 2 | ಶ್ರೀ.ಎನ್.ಕೆ.ಸತ್ಯ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:119 | 9480688119 |
| 3 | ಶ್ರೀ.ಮಹದೇವಪ್ಪ | ಕಿರಿಯ ಅಭಿಯಂತರರು ಬೆಸ್ಕಾಂ | 9449875558 |
| 4 | ಶ್ರೀ.ಬಿ.ಎಲ್.ಅರವಿಂದ್ | ಕೆಲಸ ಪರಿವೀಕ್ಷಕರು-ಬಿ.ಡಬ್ಲ್ಯೂ.ಎಸ್.ಎಸ್.ಬಿ | 9448314149 |
| 5 | ಶ್ರೀ.ಎಂ.ಬಾಬುಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್-119 | 9008233973 |
| 6 | ಶ್ರೀ.ಎನ್.ನಾಗರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು | 8073493562 |
| 7 | ಶ್ರೀ. ಸುರೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9480638719 |
| 8 | ಸಂದೇಶ್.ಹಚ್.ಎಂ | ಸ.ಅ(ವಾರ್ಡ್-119) | 9611667101 |
| 9 | ಮಂಜುನಾಥ್ | ಸ್ಥಳೀಯರು | 9880464333 |
| 10 | ರಾಕೇಶ್ | ಸ್ಥಳೀಯರು | 7019916203 |
| 11 | ಕೆ.ಸತೀಶ್ | ಸ್ಥಳೀಯರು | 7899555577 |
| 12 | ಮಹೇಂದ್ರ ವರ್ಮ | ಸ್ಥಳೀಯರು | 7204227806 |
| 13 | ವಿಜಯ್‌ಕುಮಾರ್ | ಸ್ಥಳೀಯರು | 8123055742 |
| 14 | ಶಿವಕುಮಾರ್ | ಸ್ಥಳೀಯರು | 7892288628 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳು:-**

1. **ಕಾಮಗಾರಿ ಇಲಾಖೆ:-**

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಸ್ಥಳೀಯರು ಜುಮ್ಮ ಮಸೀದಿಯ ರಸ್ತೆಯನ್ನು ಸರಿಪಡಿಸುವಂತೆ, ಫ್ಲೈಓವರ್ ರಸ್ತೆಯಲ್ಲಿ ಪಾದಚಾರಿ ಮಾರ್ಗದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಕೋರಿರುತ್ತಾರೆ. ನೂತನ ನಾಮಫಲಕಗಳನ್ನು ಅಳವಡಿಸಬೇಕೆಂದು ಕೋರಿರುತ್ತಾರೆ. ಕುಂಬಾರಗುಂಡಿ ರಸ್ತೆಯಲ್ಲಿ ಮಳೆ ನೀರು ಸರಾಗವಾಗಿ ಹೋಗಲು ಮೋರಿಯಲ್ಲಿ ದಬ್ರೀಸ್ ಅನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

2. **ಘನತ್ಯಾಜ್ಯ ವಿಭಾಗ:-**

ಘನತ್ಯಾಜ್ಯ ವಿಷಯವಾಗಿ ಬೆಸ್ಕಾಂ ಅಭಿಯಂತರರು ಸಭೆ ಮತನಾಡಿ ಟ್ರಾನ್ಸ್‌ಫಾರ್ಮರ್ ಸುತ್ತಲು ಕಸ ಹಾಕುವುದರಿಂದ ಬೆಂಕಿ ಅಪಘಾತ ಉಂಟಾಗುತ್ತದೆ ಎಂದು ತಿಳಿಸುತ್ತಾ ಟ್ರಾನ್ಸ್‌ಫಾರ್ಮರ್ ಸುತ್ತುಮುತ್ತಲಿನಲ್ಲಿ ಕಸವನ್ನು ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ. ಮಳೆ ಬಂದಾಗ ರಸ್ತೆಯಲ್ಲಿ ಬರುವ ಮಣ್ಣು ಹಾಗೂ ಇತರೆಗಳನ್ನು ಮಳೆ ನಿಂತ ತಕ್ಷಣವೇ ತೆರವುಗೊಳಿಸಬೇಕೆಂದು ಕೋರಿರುತ್ತಾರೆ.

3. **ಆರೋಗ್ಯ ಇಲಾಖೆ**

ಸಭೆಯಲ್ಲಿ ಸ್ಥಳೀಯರು ಮಾತನಾಡಿ, ವಾರ್ಡ್‌ನಲ್ಲಿ ಸೊಳ್ಳೆಗಳು ಹೆಚ್ಚಾಗಿರುವುದರಿಂದ Fogging and Spraying ಅನ್ನು ಮಾಡಲು ಕೋರಿರುತ್ತಾರೆ.

4. **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ**

ಓ.ಟಿ.ಸಿ. ರಸ್ತೆ ಹಾಗೂ ಷೇರಖಾನ್ ಗಲ್ಲಿಯಲ್ಲಿ ಬರುವ ರಸ್ತೆಯಲ್ಲಿ ಒಳಚರಂಡಿ ನೀರು ನಿಂತಿದ್ದು, ಈ ಕೂಡಲೇ ಒಳಚರಂಡಿಯನ್ನು ದುರಸ್ಥಿಗೊಳಿಸಿ ನೀರು ಸರಾಗವಾಗಿ ಹೋಗಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ. ನಿಮ್ಮ ವತಿಯಿಂದ ಅನಧಿಕೃತವಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಕೆಲಸ ಪರಿವೀಕ್ಷಕರಿಗೆ ಮಳೆ ಹೆಚ್ಚಾಗಿರುವುದರಿಂದ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -119 ಧರ್ಮರಾಯಸ್ವಾಮಿ ದೇವಸ್ಥಾನ

4/6/2022
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 119